ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಕೊಪ್ಪಳ

ಸಂ: ಕಂದಾಯ : ಕಂ.ನಂ–2262 : ಭೂಸ್ವಾ : 01 : 2016–17 ದಿನಾಂಕ: 20–12–2017.

ನಮೂನೆ–1

ಭಾಗ–ಎ

**ಸಾಮಾಜಿಕ ಪರಿಣಾಮ ನಿರ್ಧರಣೆ ಅಧಿಸೂಚನೆ**

(ನಿಯಮ 3(6)ನ್ನು ನೋಡಿ)

ಹೊಸಪೇಟೆಯಿಂದ–ಟಿನಾಯಿಘಾಟ್ ರೈಲ್ವೆ ಮಾರ್ಗವನ್ನು ಎರಡು ಮಾರ್ಗಗಳ ಯೋಜನೆಗಾಗಿ ಉಪ ಮುಖ್ಯ ಅಭಿಯಂತರರು, ದಕ್ಷಿಣ–ಪಶ್ಚಿಮ ರೈಲ್ವೆ ಹುಬ್ಬಳ್ಳಿ ಇವರಿಗೆ ಈ ಕೆಳಗಿನ ಕೋಷ್ಟಕದಲ್ಲಿನ ಕೊಪ್ಪಳ ಜಿಲ್ಲೆಯ ಕೊಪ್ಪಳ ಜಿಲ್ಲೆಯ ಗಿಣಿಗೇರಾ ಗ್ರಾಮದ ಒಟ್ಟು ವಿಸ್ತೀರ್ಣ 4061–00 ಚದರ ಮೀಟರ್ (ಸುಮಾರು 24 ಗುಂಟೆ ಕೃಷಿ ಜಮೀನು, 1791–00 ಚ.ಮೀ ಕೃಷಿಯೇತರ ಜಮೀನು) ಜಮೀನುಗಳು ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಹೊಸಪೇಟೆ–ಟಿನಾಯಿಘಾಟ್ ರೈಲ್ವೆ ಮಾರ್ಗವನ್ನು ಎರಡು ಮಾರ್ಗಗಳನ್ನಾಗಿ ಮಾರ್ಪಾಡು ಮಾಡುವ ಯೋಜನೆಗಾಗಿ ಅತ್ಯಗತ್ಯವಾಗಿ ಬೇಕಾಗಿರುವುದರಿಂದ ಜಿಲ್ಲಾಧಿಕಾರಿಗಳು ಕೊಪ್ಪಳ ಇವರು ಭಾವಿಸಿರುವುದರಿಂದ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರ ಹಕ್ಕು, ಪುನರ ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ ನಿಯಮಾವಳಿ –2015" ರ ನಿಯಮ 3(6) ರಂತೆ ಪರಿಣಾಮ ನಿರ್ಧರಣೆ ಅಧಿಸೂಚನೆಯನ್ನು ಹೊರಡಿಸಲಾಗಿದೆ.

**ಭೂಸ್ವಾಧೀನವಾಗುವ ಜಮೀನುಗಳ ವಿವರಗಳು**

| ಕ್ರ.ಸಂ | ತಾಲ್ಲೂಕು | ಗ್ರಾಮ | ಸ.ನಂ | ಭೂಸ್ವಾಧೀನ ಪ್ರಸ್ತಾವನೆಯ ಒಟ್ಟು ವಿಸ್ತೀರ್ಣ |
|---|---|---|---|---|
| 1 | ಕೊಪ್ಪಳ | ಗಿಣಿಗೇರಾ | 269/1 | 617 ಚ.ಮೀ |
| 2 | | | 269/2 | 2.26 ಗುಂಟೆ |
| 3 | | | 269/2 | 4.79 ಗುಂಟೆ |
| 4 | | | 269/4 | 8.11 ಗುಂಟೆ |
| 5 | | | 264/ಬಿ/1 | 7.87 ಗುಂಟೆ |
| 6 | | | 264/ಎ2 | 1174 ಚ.ಮೀ |

"ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ–2013" ರ ಕಲಂ 4 ರಿಂದ 9 ಹಾಗೂ "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ (ಕರ್ನಾಟಕ) ನಿಯಮಾವಳಿ –2015" ರ ನಿಯಮ 3 ರಿಂದ 15 ರಂತೆ ಭೂಸ್ವಾಧೀನವಾಗುವ ಜಮೀನುಗಳು ಹಾಗೂ ಈ ಭೂಸ್ವಾಧೀನದಿಂದ ಸಾಮಾಜಿಕವಾಗಿ ಬೀರುವ ಪ್ರಭಾವವನ್ನು ಅಧ್ಯಯನ ಮಾಡಲು ಅಂದರೆ, ಸಾಮಾಜಿಕ ಪರಿಣಾಮ ನಿರ್ಧರಣೆ ಮಾಡಲು, Sri Sudharana Rural Development Organisation (R) Bengaluru ಇವರನ್ನು ನಿಯೋಜಿಸಲಾಗಿದೆ.

ಸದರಿಯವರು ತಮ್ಮ ತಂಡದೊಂದಿಗೆ ಈ ಮೇಲ್ಕಾಣಿಸಿದ ಗ್ರಾಮಗಳಿಗೆ ಭೇಟಿ ನೀಡಿ ವಿವರಗಳನ್ನು ಕಲೆ ಹಾಕಿ ಅಧ್ಯಯನ ನಡೆಸಲಿದ್ದಾರೆ. ಏಜನ್ಸಿಯವರು ಭೇಟಿ ನೀಡುವ ದಿನಾಂಕಗಳನ್ನು ಸಾರ್ವಜನಿಕ ಪ್ರಕಟಣೆ ಹೊರಡಿಸಿ ತಿಳಿಸಲಾಗುವುದು ಈ ಅಧ್ಯಯನದ ಭಾಗವಾಗಿ ಸಂಬಂಧಿಸಿದ ಗ್ರಾಮಗಳ ಜಮೀನುಗಳ ಭೂಮಾಲೀಕರು, ರೈತರು, ಗ್ರಾಮಸ್ಥರು ಮತ್ತು ಗ್ರಾಮದ ಮುಖಂಡರ ಸಮ್ಮುಖದಲ್ಲಿ ಗ್ರಾಮ ಸಭೆಗಳು, ರೈತರೊಂದಿಗೆ ಮುಖಾಮುಖಿ ಸಂವಾದ ನಡೆಸಿ ಅಭಿಪ್ರಾಯ ಸಂಗ್ರಹಿಸಲಿದ್ದಾರೆ.

ಸದರಿ ಭೂಸ್ವಾಧೀನ ಬಗ್ಗೆ ಯಾವುದಾದರೂ ಆಕ್ಷೇಪಣೆಗಳು/ ಅಭಿಪ್ರಾಯಗಳು ಇದ್ದಲ್ಲಿ ಗ್ರಾಮ ಸಭೆಯ ದಿನದಂದು ಅದಕ್ಕೆ ಸಂಬಂಧಿಸಿದ ದಾಖಲೆಗಳೊಂದಿಗೆ Sri Sudharana Rural Development Organisation (R) Bengaluru ಇವರಿಗೆ ನೀಡುವುದು. ಈ ಸಮಯದ ನಂತರ ಬಂದ ಆಕ್ಷೇಪಣೆಗಳು ಸಮಂಜಸವಾಗಿಲ್ಲದಿದ್ದಲ್ಲಿ, ಆಧಾರ ರಹಿತವಾಗಿದ್ದಲ್ಲಿ ಯಾವುದೇ ಚರ್ಚೆ ಇಲ್ಲದೇ ಮತ್ತು ಯಾವುದೇ ರೀತಿಯಲ್ಲಿ ಪರಿಗಣಿಸಲಾವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಿದೆ. ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ, ಜಮೀನುಗಳ ವಿವರಗಳನ್ನು ಉಪವಿಭಾಗಾಧಿಕಾರಿಗಳು ಹಾಗೂ ಭೂಸ್ವಾಧೀನಾಧಿಕಾರಿಗಳು, ಕೊಪ್ಪಳ ಇವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪರಿಶೀಲಿಸಬಹುದು. ಇಲ್ಲವಾದಲ್ಲಿ ಗ್ರಾಮ ಸಭೆಯ ದಿನದಂದು ಗ್ರಾಮ ಸಭೆಯಲ್ಲಿ ಪರಿಶೀಲಿಸಬಹುದು.

ಈ ಮೇಲ್ಕಂಡ ಸಾಮಾಜಿಕ ನಿರ್ಧರಣೆಯು ಸರ್ಕಾರವು ನೀಡಿದ ನಿರ್ದೇಶನ, ಸುತ್ತೋಲೆ ಹಾಗೂ " ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರ ಹಕ್ಕು, ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ –2013" ರ ಅಧ್ಯಾಯ –02 ರ ಕಲಂ 04 ರಿಂದ 09 ಹಾಗೂ "ಭೂಸ್ವಾಧಿನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರ ಹಕ್ಕು, ಪುನರ್‌ವಸತಿ ಮತ್ತು ಪುನರ್ ನಿರ್ಮಾನ (ಕರ್ನಾಟಕ) ನಿಯಮಾವಳಿ –2015" ರ ನಿಯಮ 3 ರಿಂದ 15 ರಂತೆ ನಡೆಯುತ್ತದೆ ಈ ಅಧ್ಯಯನದ ಮೇಲೆ ಯಾವುದೇ ವ್ಯಕ್ತಿ ಯಾವುದೇ ರೀತಿಯ ಪ್ರಭಾವ ಬೀರುವುದಾಗಲಿ, ಪ್ರಲೋಭನೆ ಉಂಟು ಮಾಡಿದರೆ ಕಾನೂನು ಪ್ರಕಾರ ಸೂಕ್ತ ಕ್ರಮ ಜರುಗಿಸಲಾಗುವುದು.

ಗ್ರಾಮ ಸಭೆಗಳು, ಭೂಮಾಲೀಕರೊಂದಿಗಿನ ಸಮಾಲೋಚನೆಗಳ ನಂತರ ಕರಡು ಸಾಮಾಜಿಕ ಪರಿಣಾಮ ನಿರ್ಧರಣೆಯನ್ನು ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಲಾಗುವುದು. ನಂತರ ಕರಡು ಸಾಮಾಜಿಕ ನಿರ್ಧರಣೆಯನ್ನು ಗ್ರಾಮ ಸಭೆಯಲ್ಲಿ ಮಂಡಿಸಿ ಅಭಿಪ್ರಾಯ ಸಂಗ್ರಹಿಸಲಾಗುವುದು. ನಂತರ ವಿಶೇಷ ತಜ್ಞರ ತಂಡಕ್ಕೆ ಕಳುಹಿಸಿ, ಅವರಿಂದ ಯಾವುದಾದರೂ ಶಿಫಾರಸ್ಸುಗಳು ಇದ್ದಲ್ಲಿ ಅವುಗಳನ್ನು ಪರಿಗಣಿಸಿ ಅಂತಿಮವಾಗಿ ಎಲ್ಲಾ ಆಕ್ಷೇಪಣೆಗಳನ್ನು ವಿಲೇವಾರಿ ಮಾಡಿ ಸಾಮಾಜಿಕ ಪರಿಣಾಮ (ಎಸ್.ಐ.ಎ) ವರದಿ ಹಾಗೂ ಸಾಮಾಜಿಕ ವ್ಯವಸ್ಥಾಪನಾ ಯೋಜನೆ (ಎಸ್.ಐ.ಎಂ.ಪಿ) ಯನ್ನು ರಾಜ್ಯ ಆಯುಕ್ತರು ಪುನರ್ ವಸತಿ ಮತ್ತು ಪುನರ್ ನಿರ್ಮಾಣ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಅನುಮೋದನೆಗಾಗಿ ಸಲ್ಲಿಸಲಾಗುವುದು.

ಯಾವುದಾದರೂ ಅನಿವಾರ್ಯ ಅಥವಾ ಇತರೆ ಕಾರಣಗಳಿಂದ ಗ್ರಾಮ ಸಭೆಯ ದಿನಾಂಕಗಳನ್ನು ಬದಲಾಯಿಸಲು ಮತ್ತು ಬೇರೆ ದಿನಾಂಕವನ್ನು ನಿಗದಿಪಡಿಸಲು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳು ಅಧಿಕಾರ ಹೊಂದಿರುತ್ತಾರೆ.

ಜಿಲ್ಲಾಧಿಕಾರಿಗಳು
ಕೊಪ್ಪಳ

ಪ್ರತಿಯನ್ನು:-

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ, ಕೊಪ್ಪಳ
2) ಸಹಾಯಕ ಆಯುಕ್ತರು, ಕೊಪ್ಪಳ
3) ತಹಶೀಲ್ದಾರ, ಕೊಪ್ಪಳ.
4) Deputy Chief Engineer (Construction), South Western Railway, Club road, Keshawpur Hubli.
5) ಕಾರ್ಯನಿರ್ವಾಹಕ ಅಧಿಕಾರಿಗಳು, ತಾ.ಪಂ, ಕೊಪ್ಪಳ.
6) ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಗ್ರಾ. ಪಂ, ಗಿಣಿಗೇರಾ
7) ಕಂದಾಯ ನಿರೀಕ್ಷಕರು, ಕೊಪ್ಪಳ/ ಗ್ರಾಮ ಲೆಕ್ಕಿಗ, ಗಿಣಿಗೇರಾ